# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ (ಬಟ್ಲಹಳ್ಳಿ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಮಧು ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಭರತ್ | ಫ್ರಾಸಾಃ | 02 |
| **ತಂದೆಯ ಹೆಸರುಃ** | ಚೌಡರೆಡ್ಡಿ | ಚಾಸಾಃ | 02 |
| **ವಯಸ್ಸುಃ** | 23 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 25.02.2025. |
| **ಉದ್ಯೋಗಃ** | ವಿದ್ಯಾರ್ಥಿನಿ | | |
| **ವಾಸ ಸ್ಥಳಃ** | ವೈ.ಗೊಲ್ಲಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು. | | |

## <u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಮತ್ತು ಗೈರು ಹಾಜರಾಗಿರುವ 6 ನೇ ಆರೋಪಿ ನನಗೆ ಗೊತ್ತು. ಫ್ರಾ.ಸಾ.1 ನನ್ನ ತಂದೆ. ಚಾ.ಸಾ.3 ಮತ್ತು ಚಾ.ಸಾ.4 ರವರು ವರಸೆಯಲ್ಲಿ ನನ್ನ ದೊಡ್ಡಪ್ಪಂದಿರು. ಚಾ.ಸಾ.5 ರವರು ವರಸೆಯಲ್ಲಿ ನನ್ನ ಅಣ್ಣ. ಚಾ.ಸಾ.6 ಮತ್ತು ಚಾ.ಸಾ.7 ರವರು ವರಸೆಯಲ್ಲಿ ನನ್ನ ದೊಡ್ಡಪ್ಪಂದಿರು. ಚಾ.ಸಾ.8 ರವರು ನಮ್ಮ ಟೆಂಪೋ ಚಾಲಕ.

2) ದಿನಾಂಕಃ26.08.2022 ರಂದು ಬೆಳಿಗ್ಗೆ 8.00 ಗಂಟೆಗೆ ನಮ್ಮ ಊರಿನಲ್ಲಿರುವ ಶ್ರೀನಿವಾಸರೆಡ್ಡಿರವರ(ಚಾ.ಸಾ.6) ಅಂಗಡಿಯ ಹತ್ತಿರ ನಾನು ಒಬ್ಬನೇ

ಇದ್ದೆ. ನಾನು ಅಂಗಡಿಗೆ ಬಿಸ್ಕೆಟ್ ತೆಗೆದುಕೊಳ್ಳಲು ಹೋಗಿದ್ದೆ. ಅಲ್ಲಿಗೆ 2 ಮತ್ತು 3 ನೇ ಆರೋಪಿತರು ಹಿಂದಿನಿಂದ ಬಂದು ನನ್ನನ್ನು ಕೆಳಗೆ ಬೀಳಿಸಿ ನನ್ನ ಮೈಗೇ ಕೈಯಿಂದ ಹೊಡೆದರು ಮತ್ತು ಕಾಲಿನಿಂದ ತುಳಿದರು. ನನಗೆ ಮೈಕೈ ನೋವು ಆಗಿ ಸುಸ್ತಾಯಿತು. ಟೆಂಪೋ ವಿಚಾರಕ್ಕೆ ನನ್ನನ್ನು 2 ಮತ್ತು 3 ನೇ ಆರೋಪಿತರು ಹೊಡೆದರು. ನನ್ನ ಜೊತೆಯಲ್ಲಿ ನರೇಂದ್ರ ಎನ್ನುವವರು ಇದ್ದರು. ಮೊದಲು 2 ಮತ್ತು 3 ನೇ ಆರೋಪಿತರು ನರೇಂದ್ರನನ್ನು ಹೊಡೆದರು. ಜಗಳವನ್ನು ಚಾ.ಸಾ.5 ಮತ್ತು ಚಾ.ಸಾ.6 ರವರು ಬಿಡಿಸಿದರು. ಸದರಿ ವಿಷಯವನ್ನು ನಾನು ನನ್ನ ತಂದೆಗೆ ಫೋನ್ ಮುಖಾಂತರ ತಿಳಿಸಿದೆನು. ಸ್ಥಳಕ್ಕೆ ನನ್ನ ತಾಯಿ ಅರುಣ ಬಂದು ನನ್ನನ್ನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೋಸ್ಕರ ದಾಖಲಾಗಿದ್ದೆನು. ಅದೇ ದಿನ ರಾತ್ರಿ 8.30-9.00 ಗಂಟೆ ಸಮಯದಲ್ಲಿ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ನನ್ನ ತಂದೆಯನ್ನು ನನ್ನ ದೊಡ್ಡಪ್ಪ ಚಾ.ಸಾ.3 ಮತ್ತು ಚಾ.ಸಾ.7 ರವರು ಕರೆದುಕೊಂಡು ಬಂದರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ.ರವರು ಮುಂದುವರೆದ ವಿಚಾರಣೆಗೆ ಸಮಯ ಕೋರಿದ್ದು, ಸಮಯವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ25.02.2025 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3) ದಿಃ 10.02.2019 ರಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಈಗ ನನಗೆ ಓದಿ ಹೇಳಿದಂತೆ, " ನಮ್ಮ ತಂದೆ ತಾಯಿಗೆ ...................................................................... ................................ಕೋರುತ್ತೇನೆ ಸ್ವಾಮಿ " ಎಂಬುದಾಗಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಲಾದ ದಾಖಲೆಯನ್ನು ನಿ.ಪಿ. ಎಂದು ಮತ್ತು ಸಂಬಂಧಪಟ್ಟ ಭಾಗವನ್ನು ನಿಪಿ.1(ಬಿ) ಎಂದು ಗುರುತಿಸಲಾಗಿದೆ.

4) ಎಲ್ಲ ವಿಚಾರಗಳು ಗೊತ್ತಿದ್ದರೂ, ನಿಪಿ. ರಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಎನ್.ವಕೀಲರು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ

**(ನಾಗವೇಣಿ)**

ಸ್ಥಳಃ ಚಿಂತಾಮಣಿ

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.